ನನ್ನಮ್ಮ ಸತ್ತಳು ಒಂದು ದಿನ ಎಲ್ಲರಂತೆ. ಇಂದು ವೈಕುಂಠ, ಜನಸಾಗರವೇ ಹರಿದು ಬಂದಿತ್ತು. ಇಷ್ಟೊಂದು ಜನದ ವಿಶ್ವಾಸವನ್ನು ಅಮ್ಮ ಹೇಗೆ ಗಳಿಸಿದಳು? ಮನೆ ಒಳಗೆಲ್ಲ ತುಂಬಿ ಹೊರಗಿನಂಗಳದಲ್ಲಿಯೂ ನಿಂತ ಜನ ಜಾತ್ರೆ, ಮಳೆ ಜಿಟಿ ಜಿಟಿ ಹನಿಯುತ್ತಿದೆ. ಜನ ಜಂಗುಳಿ ಕಂಡವರಿಗೆಲ್ಲ ಅಚ್ಚರಿ. ಈ ಕುಗ್ರಾಮದಲ್ಲಿ ಈ ಪರಿ ಜನ ಸೇರಿದ್ದಾದರೂ ಹೇಗೆ? ಎಲ್ಲಿಂದ ಬಂದರಿವರು? ನೆಂಟರು ಇಷ್ಟರು ಆತ್ಮೀಯರು. ಮಕ್ಕಳು ಮರಿಗಳು ಬೀಗರು ಬಾಂಧವರು. ಇವರೆಲ್ಲರ ಪ್ರೀತಿ ವಿಶ್ವಾಸವನ್ನು ಹೇಗೆ ಸಂಪಾದಿಸಿದಳು? ಏನು ಕೊಟ್ಟು ಪಡೆದಳು? ಬರುತ್ತಿದ್ದಾರೆ. ಹೋಗುತ್ತಿದ್ದಾರೆ. ಊಟ ಮಾಡುತ್ತಾರೆ. ಗುಣಗಾನ ಮಾಡುತ್ತಾರೆ. ಕಂಬನಿ ಮಿಡಿಯುತ್ತಾರೆ. ಅಮ್ಮ ಇನ್ನು ಬರೇ ನೆನಪು. ಗೊಣಗಾಟದ ಕೊರಗಿನಿಂದ ಸದಾ ನೋಯುತ್ತಿದ್ದ ಜೀವಕ್ಕೆ ಮುಕ್ತಿ ದೊರಕಿತು. ಶಾರಿ ನಿಟ್ಟುಸಿರಿಟ್ಟಳು.

'ಶಾರದಾ... ನಿನ್ನಮ್ಮಾ... ತೊದಲಿದರು ಅಪ್ಪಯ್ಯ.'

'ಅಪ್ಪಯ್ಯ ಏನ್ ಹೇಳ್ತಾ ಇದ್ದೀರಾ? ಇದು ಸುಳ್ಳಲ್ಲ ತಾನೆ?' ಅಪ್ಪಯ್ಯ ಅಳುತ್ತಿದ್ದರು. ಗಂಟಲು ಕಟ್ಟಿ ಮುಂದೆ ಮಾತನಾಡಲಾರದೆ ಗೊಗ್ಗರು ದನಿಯಲ್ಲಿ 'ಬೇಗ ಬಾ ಮಗಳೇ' ಅನ್ನುವುದರಲ್ಲಿ ದೂರವಾಣಿಯ ಸಂಪರ್ಕ ಕಡಿಯಿತು.

ವಾರದ ಹಿಂದಷ್ಟೇ ಆರೋಗ್ಯದಲ್ಲಿ ಏರುಪೇರಾಗಿದ್ದರಿಂದ ಹತ್ತಿರದ ಆಸ್ಪತ್ರೆಗೆ ಸೇರಿಸಿದ್ದರು. ಎದೆಯಲ್ಲಿ ಕಫ ಕಟ್ಟಿದ್ದರಿಂದ ಮಾತನಾಡಲು ಕಷ್ಟವಾಗುತ್ತಿತ್ತು. ಡಾಕ್ಟರ್ ಏನೂ ಹೇಳಲಾಗದೆ ಮೌನವಾಗಿದ್ದರು. ಕಣ್ಣುಮುಚ್ಚಿ ಮಲಗಿದ್ದ ಅಮ್ಮ ಉಸಿರಾಡುತ್ತಿದ್ದಳಷ್ಟೆ. ಕರೆದರೆ ಕಣ್ಣು ತೆರೆದು ಆಂ ಎನ್ನುತ್ತಾ ಮತ್ತೆ ಕಣ್ಣು ಮುಚ್ಚುತ್ತಿದ್ದಳು. ಅವಳ ನೋಟ, ಸಾಕು ನಿಮ್ಮಗಳ ಸಹವಾಸ ಎನ್ನುವಂತಿತ್ತು. ಅವಳಿಗೆ ಸಾವಿನ ಸೂಚನೆ ತಿಳಿದಿತ್ತೇ?

ಒಂದು ತಿಂಗಳ ಹಿಂದೆಯಷ್ಟೇ ಮಕ್ಕಳ ಮನೆಗೆಲ್ಲ ತಿರುಗಾಡಿ ಬರುವನೆಂದು ಮಗನೊಂದಿಗೆ ಬಂದಿಳಿದಿದ್ದಳು. ಎಷ್ಟೊಂದು ಗೆಲುವಾಗಿ ಓಡಾಡಿಕೊಂಡು ತಿಂದುಂಡು ಹೋಗಿದ್ದಳು. 'ಶಾರಿ ಇವತ್ತು ಇಡಿ ಗೋಧಿ ಪಾಯಸ ಮಾಡಿ ಹಲಸಿನ ಕಾಯಿ ಪಕೋಡ ಮಾಡೆ. ಹಾಗೆ ಪಾಯಸಕ್ಕೆ ದ್ರಾಕ್ಷಿ, ಗೋಡಂಬೀನು ಚೆನ್ನಾಗೆ ಹಾಕು. ಮಧ್ಯಾಹ್ನನೇ ಮಾಡಿಬಿಡು. ಸಂಜೆ ಮೇಲೆ ತಿಂದ್ರೆ ಆಗೋಲ್ಲ ಕಣೆ. ಇನ್ನೊಂಚೂರು ಪಾಯಸ ಹಾಕೇ' ಎನ್ನುತ್ತಾ ಸೊರಬರನೆ ಸುರಿಯತೊಡಗಿದ್ದಳು. ಸಿಹಿ ತಿಂದ್ರೆ ನಿಂಗಾಗಲಮ್ಮ ಎನ್ನುತ್ತಲೇ ಇನ್ನೊಂದು ಸೌಟು ತಟ್ಟೆಗೆ ಹಾಕಿದ್ದಳು ಶಾರಿ.

'ಅಯ್ಯೋ ಬಿಡು ಶಾರಿ ಯಾವತ್ತಿದ್ರೂ ಒಂದಿನ ಸಾಯಲೇಬೇಕಲ್ಲ, ತಿಂದೇ ಸತ್ರಾಯ್ತು. ಎಲ್ಲಿಂದ ಬಂದು ಅಂಟುಕೊಂಡ್ತೋ ಈ ಸಕ್ಕರೆ ಕಾಯಿಲೆ'.

ಒಂದೇ ತುತ್ತು ಮಜ್ಜಿಗೆಯನ್ನ ತಿನ್ನುತ್ತ ಕೈಯನ್ನ ನೆಕ್ಕುತ್ತಾ ಡರ್ರೆಂದು ತೇಗಿದ್ದಳು. 'ಈ ಜೀವಕ್ಕೆ ಸಂತೃಪ್ತಿಯಾಯ್ತು ಕಣೆ ಶಾರಿ. ನಿನ್ನ ತರ ಮೊಸರು ಮಜ್ಜಿಗೆ ಮಾಡೋಕೆ ನನ್ನ ಸೊಸೆಯರಿಗೆ ಬರಲ್ಲ ಕಣೆ. ಏನ್ ಪರಿಮಳ. ಅದೇನ್ ರುಚಿ, ಮಜ್ಜಿಗೇನು ಮೊಸರಿನ ತರ ಗಟ್ಟಿಯಾಗಿರತ್ತೆ. ನಮ್ಮನೇಲೋ ಏನೋ ವಾಸನೆ'. ನೀರ್ ನೀರ್ ಚಪ್ಪರಿಸುತ್ತಾ ಅಮ್ಮ ಮಜ್ಜಿಗೆ ಅಂಟಿದ ಕೈ ಬೆರಳು ಚೀಪುತ್ತ ಉಣ್ಣುತ್ತಿದರೆ ಹಾಲು ಮಜ್ಜಿಗೆ ಕಾಣದವಳ ಥರ ಯಾಕೆ ಆಡುತ್ತಾಳೋ ಅನ್ನಿಸುತ್ತಿತ್ತು ಶಾರಿಗೆ.

ಮಗಳ ಮನಸ್ಸು ಓದಿದವರಂತೆ. 'ಎಮ್ಮೆ ದನಾಂತ ಕರಾವು ಸಮೃದ್ಧವಾಗಿದೆ ನಮ್ಮನೇಲಿ, ಎರಡು ಹೊತ್ತು ಹಾಲು ಮಾರಿದರೆ ಅಲ್ಲಿ ಉಳಿಯೋದು ಪಾತ್ರೆ ತೊಳೆದ ನೀರು, ಕಲಗಚ್ಚು ಗೊತ್ತಲ್ಲ ಮಗಾ ನಿಂಗೆ..' ಹುಳ್ಳಗೆ ನಗುತ್ತ ತಟ್ಟೆ ಎತ್ತಿಕೊಂಡು ಹಿತ್ತಲಿಗೆ ನಡೆದಿದ್ದಳು ಅಮ್ಮ.

ಶಾರಿ ತವರಿಗೆ ಹೋದಾಗಲೆಲ್ಲ ಅತ್ತಿಗೆಗೆ ನಯವಾಗಿಯೇ ಹೇಳುತ್ತಿದ್ದಳು. 'ಅತ್ತಿಗೆ ಅಮ್ಮಂಗೆ ಊಟ ಅಡಿಗೆ ಅಚ್ಚುಕಟ್ಟಾಗಿರಬೇಕು. ಹಾಲು ಮೊಸರು ಗಟ್ಟಿಯಾಗಿ ತಿಂದು ರೂಢಿಯಾಗಿದೆ. ವಯಸ್ಸಾದ ಮೇಲೆ ಚೂರು ಬಾಯಿ ರುಚೀನೂ ಹೆಚ್ಚಾಗಿದೆ. ನೀವು ಮಾಡೋ ಅಡಿಗೆ ಚೆನ್ನಾಗಿಯೇ ಇರುತ್ತೆ. ಒಂಚೂರು ಕೆನೆ ತೆಗೆದು ಮೊಸರು ಹೆಪ್ಪಾಕಿ ಇಡಿ'. ಶಾರಿ ಊರಲ್ಲಿ ಇರೋ ತನಕ ತಪ್ಪದೇ ಇದು ನಡೆಯುತ್ತಿತ್ತು. ನಾದಿನಿಯ ಮಾತಿಗೂ ಬೆಲೆ ಸಿಗುತ್ತಿತ್ತು.

ನೀನು ಇತ್ತ ಬಂದೆಯೋ ಮತ್ತದೆ ಕಥೆ ಕಣೆ. ಅದೇ ಒಣ ಒಣ ಅಡಿಗೆ. ಮನೆಯಲ್ಲೇ ಬೆಳೆಯೋ ತರಕಾರಿ ಎರಡು ಮೂರು ಬಗೆಯೆಂದು ಹೆಚ್ಚಿಟ್ಟರೆ ನಾಳೆಗಾಯಿತೆಂದು ಒಂದಿಷ್ಟು ತೆಗೆದಿಡುವ ಸೊಸೆ. ಕಾಯಿ ಹೆಚ್ಚು ತಿನ್ನಬಾರದೆಂದು ವಾರಗಟ್ಟಲೆ ಒಂದೇ ತೆಂಗಿನಕಾಯಿಯಲ್ಲೇ ಅಡಿಗೆ ಮುಗಿಸಿ ಕೆಲಸದಾಳಿಗೆ ಕಾಯಿಯನ್ನು ಮಾರಿಕೊಳ್ಳುವ ಜಾಣೆ.

'ಈ ಸರ್ತಿ ಹದಿನೈದು ದಿನ ನಿಮ್ಮನೇಲೇ ಇರ್ತೀನಿ ಕಣೇ. ಇನ್ನೇನು ಬರ್ತೀನೋ ಇಲ್ವೋ?'

'ಬಿಡ್ತು ಅನ್ನಮ್ಮ, ಹಾಗೆಲ್ಲ ಹೇಳ್ ಬೇಡ.' ಶಾರಿ ಬೇಸರದಿಂದ ಹೇಳಿದಳು. 'ಯಾಕೋ ಗೊತ್ತಿಲ್ಲ ಕಣೇ ಹಾಗನ್ನಿಸ್ತಾ ಇದೆ' ಅಮ್ಮನ ತಣ್ಣಗಿನ ದನಿ.

ಐದು ಮಕ್ಕಳಲ್ಲಿ ಶಾರಿನ ಕಂಡ್ರೆ ಒಂದಷ್ಟು ಹೆಚ್ಚಿನ ಪ್ರೀತಿ, ಅಕ್ಕರೆ. ತಮ್ಮೆಲ್ಲ ನೋವು ನಲಿವು ಸಮಸ್ಯೆಗಳನ್ನು ಅವಳಲ್ಲಿ ತೋಡಿಕೊಳ್ಳುತ್ತಿದ್ದರು. ಅವಳೂ ಅಷ್ಟೇ ಅಮ್ಮ ಬಂದಳೆಂದರೆ ಕಾರಿನಲ್ಲಿ ದೇವಸ್ಥಾನಗಳು. ಪಾರ್ಕುಗಳು ನೆಂಟರಿಷ್ಟರ ಮನೆಗೆಲ್ಲ ಸುತ್ತಾಡಿಸುತ್ತಿದ್ದಳು. ಓಲ್ವೋ ಬಸ್ಸು ಹತ್ತಿಸುತ್ತಿದ್ದಳು. ದೊಡ್ಡ ದೊಡ್ಡ ಚಿನ್ನದಂಗಡಿಗೆ ಕರೆದೊಯ್ಯುತ್ತಿದ್ದಳು. ಜಗಮಗಿಸುವ ಅಂಗಡಿ ಅಲ್ಲಿ ಪಳಪಳಿಸುವ ತರತರದ ಚಿನ್ನದೊಡವೆಗಳನ್ನು ಕಂಡು ಮೂಕವಿಸ್ಮಿತಳಾಗುತ್ತಿದ್ದಳು. ಮಂತ್ರಿ ಮಾಲ್ ಒಳಗಡಿಯಿಟ್ಟರೆ ಭೂತ ಭಂಗಲೆಯ ಕಾಣುತ್ತಾ ಹೊಕ್ಕ ಬಾಗಿಲು ಕಾಣದೆ ಹೊರಬರುವುದೆಲ್ಲಿಂದ ಅಂತ ಗಾಬರಿಗೊಳಗಾಗಿದ್ದಳು. ಒಮ್ಮೆ ಊರಿಗೆ ಬರುವಾಗ ಸ್ಲೀಪರ್ ಕೋಚಿನಲ್ಲಿ ಮಲಗಿಸಿಕೊಂಡು ಬಂದಿದ್ದಳು. ಅಚ್ಚರಿಯಿಂದ ಸಡಗರದಿಂದ ಇದನ್ನೆಲ್ಲ ಅಕ್ಕಪಕ್ಕದವರೊಂದಿಗೆ ಮನೆಯ ಕೆಲಸದಾಳುಗಳೊಂದಿಗೋ ಹೇಳಿಕೊಳ್ಳುತ್ತಾ ಸಮಯ ಕಳೆಯುತ್ತಿದ್ದಳು.

'ಬದುಕು ಅಂದ್ರೆ ಹೀಗೆ ಅಮ್ಮ, ಒಳ್ಳೇದು ಕೆಟ್ಟದ್ದು ರೋಗ ರುಜಿನ ಇದ್ದದ್ದೇ. ಹಗಲು ರಾತ್ರಿ ತರ. ನೀನು ಯಾವುದಕ್ಕೂ ತಲೆ ಕೆಡಿಸ್ಕೋಬೇಡ'.

'ಇಲ್ಲ ಶಾರಿ ನಂಗು ಜೀವನ ಸಾಕಾಗಿ ಹೋಗಿದೆ. ಆಗೆಲ್ಲ ಅತ್ತೆ ನಾದಿನಿಯರ ಕೈಯಲ್ಲಿ

